ಒ.ಎಸ್.ನಂ. 26/2021
PW-2

(ಇಂದು ದಿನಾಂಕಃ 26-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ BS ವಕೀಲರಿಂದಃ**

ನನ್ನ ಮನೆ ಮತ್ತು 1ನೇ ಪ್ರತಿವಾದಿಯ ಮನೆಗೆ ಬಹಳ ಅಂತರವಿದೆ. ಅಮಿತಸಿಂಗ್ ಚಿಂಚೋಳಿಯಲ್ಲಿರುವುದಿಲ್ಲ ಎಂದರೆ ಸರಿ. ಅಮಿತಸಿಂಗ್ ರವರ ಮನೆಯಲ್ಲಿ ಬಡಿಗೇರ ಮೌನಪ್ಪ ವಾಸ ಇದ್ದಾನೆ ಎಂದರೆ ಸರಿ. ಆತ ಏಕೆ ವಾಸವಿದ್ದಾನೆ ಎಂದು ನಾವು ವಿಚಾರಿಸಿರುವುದಿಲ್ಲ. ಈ ನ್ಯಾಯಾಲಯವು ಅಸಲು ದಾವಾ ಸಂಖ್ಯೆ 34/2021 ರಲ್ಲಿ ಮಾಡಿದ ಆದೇಶದ ಅನ್ವಯ ಅಮಿತಸಿಂಗ್‌ನ ಮನೆಯನ್ನು ಮೌನಪ್ಪ ಬಡಿಗೇರ ಸ್ವಾಧೀನವನ್ನು ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಮಲ್ಜಾರಿ ಸಂಖ್ಯೆ 14/2023 ರ ಅನ್ವಯ ಮೌನಪ್ಪ ಬಡಿಗೇರ ರವರು ಅಮಿತಸಿಂಗ್‌ನ ಮನೆಯನ್ನು ತಮ್ಮ ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಮನೆಯಲ್ಲಿ ವಾದಿಗಳು ಮತ್ತು 1ನೇ ಪ್ರತಿವಾದಿ ಯಾವತ್ತೂ ಮನೆಯಲ್ಲಿ ವಾಸ ಇಲ್ಲ ಎಂದರೆ ಸರಿ.

ಹೀರಾಲಾಲ ನನಗೆ ಗೊತ್ತಿಲ್ಲ. ಅವನು ಬೀದರ ಜಿಲ್ಲೆಯ ನಿಡುವಂಚಿ ಗ್ರಾಮದವನು ಎಂದರೆ ನನಗೆ ಗೊತ್ತಿಲ್ಲ. ಆ ಹೀರಾಲಾಲ ನಿಡುವಂಚಿ ಗ್ರಾಮ ತೊರೆದು ಚಿಂಚೋಳಿಯಲ್ಲಿ ಬಂದು ವಾಸ ಇದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಹೀರಾಸಿಂಗ್‌ನ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ಹೀರಾಸಿಂಗ್ ಮನೆ ಅಳಿಯ ಇರಬಹುದು. ನಾನು ಹೀರಾಸಿಂಗ್‌ನನ್ನು ನೋಡಿರುತ್ತೇನೆ. ಹೀರಾಲಾಲ ನನಗೆ ಗೊತ್ತಿರುವುದಿಲ್ಲ. ಹೀರಾಸಿಂಗ್ ನಿಗೆ ಮೂರು ಜನ ಮಕ್ಕಳು. ಅವರೆಂದರೆ, ಹನುಮಾನ ಸಿಂಗ್, ಪ್ರತಾಪ್ ಸಿಂಗ್, ಪೃಥ್ವಿರಾಜ್ ಸಿಂಗ್. ಹೀರಾಸಿಂಗನ ಮೂರು ಮಕ್ಕಳ ಪೈಕಿ ಪೃಥ್ವಿರಾಜ್ ಸಿಂಗ್ ಬೀದರ ಜಿಲ್ಲೆಯ ಜನಿವಾಡ ಗ್ರಾಮಕ್ಕೆ ದತ್ತು ಹೋಗಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಪೃಥ್ವಿರಾಜ್ ಸಿಂಗ್ ದತ್ತಕ ಹೋಗಿದ್ದರಿಂದ ಆತನ ಪರಿಚಯ ಚಿಂಚೋಳಿ ಗ್ರಾಮದವರಿಗೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಹೀರಾಸಿಂಗ ನನ್ನು ನೋಡಿದರೆ ಗುರುತು ಹಿಡಿಯುತ್ತೇನೆ.

ದಾವ ಜಮೀನು ಸ.ನಂಬರ 296/2, 296/1 ಇವುಗಳ ಮೂಲ ಮಾಲೀಕರು ಯಾರಿದ್ದರು ಎಂದು ನನಗೆ ಗೊತ್ತಿಲ್ಲ. ಶೇಷುಸಿಂಗ ತಂದೆ ಭಿಕ್ಕು ಸಿಂಗ ರವರು ಮೂಲ ಮಾಲೀಕರು ಎಂದರೆ ನನಗೆ ಗೊತ್ತಿಲ್ಲ. ಅವರಿಂದ ಹೀರಾಸಿಂಗ ದಾವಾ ಜಮೀನುಗಳನ್ನು ಕ್ರಯ ಪಡೆದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಂತರ ಹೀರಾಸಿಂಗ್ ಆ ಕ್ರಯ ಪಡೆದ ದಾವಾ ಜಮೀನುಗಳನ್ನು ಅಮೀತಸಿಂಗ್ ನಿಗೆ ದಾನದ ರೂಪದಲ್ಲಿ ನೀಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಆ ಕಾರಣ ದಾವಾ ಜಮೀನುಗಳು ಅಮೀತಸಿಂಗ್‌ನ ಸ್ವಯಾರ್ಜಿತ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ಅಮೀತಸಿಂಗ್‌ನು ಅಲ್ಪ ವಯ ಇದ್ದಾಗಲೇ ಆತನಿಗೆ ದಾವಾ ಜಮೀನನ್ನು ದಾನ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಒ.ಎಸ್.ನಂ. 26/2021
PW-2

ಹೀರಾಸಿಂಗ್ ತೀರಿಕೆಕೊಂಡ ನಂತರ 1ನೇ ಪ್ರತಿವಾದಿಯ ದೊಡಪ್ಪ ಮತ್ತು ಆತನ ಮಗ ಇದೇ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿ ಅವರ ವಿರುದ್ದ ತೀರ್ಪು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಂಗತಿಗಳನ್ನು ನಮೂದಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.